ವಿಷಯ:- ಹಿರೇಕೆರೂರು ತಾಲ್ಲೂಕಿನಲ್ಲಿ ವಿದ್ಯುತ್ ಅಭಾವ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 107 (125)

ಶ್ರೀ ಯು.ಬಿ. ಬಣಕರ್ (ಹಿರೇಕೆರೂರು)

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಹಿರೇಕೆರೂರು ತಾಲೂಕಿನಲ್ಲಿ ವಿದ್ಯುತ್ ಅಭಾವ ತೀವ್ರವಾಗಿರುವುದು ನಿಜವೆ?

ಆ) ಈ ಬಗ್ಗೆ ರೈತರು ಬಳಕೆದಾರರ ಪ್ರತಿ ಬಟನೆಯಿಂದ ಅವರುಗಳ ಮೇಲೆ ಕೇಸು ಗಳಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಕಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್
(ಉಪಮುಖ್ಯ ಮಂತ್ರಿಗಳು)

ಅ) ಹೌದು

ಆ) ಇಲ್ಲ

ಇ) ಹಿರೇಕೆರೂರು ತಾಲೂಕಿನಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಮಂಡಳಿಯು ಈ ತಾಲೂಕಿನ ಹಂಸಭಾವಿ ಗ್ರಾಮದಲ್ಲಿ ಒಂದು 33:11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸುಮಾರು 150 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿದ್ದು ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ.

ವಿಷಯ :- ವಿದ್ಯುತ್ ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ ದರ ನಿಗದಿ ಪಡಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 108(126)

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು)

ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟುಉತ್ತರಿಸುವಿರೆ

ಅ) ರೈತರ ನೀರಾವರಿ ಪಂಪು ಸೆಟ್ಟುಗಳಿಗೆ ಉಚಿತವಾಗಿ ಪೂರೈಸುತ್ತಿರುವ ವಿದ್ಯುತ್‌ಗೆ ಸರ್ಕಾರದವರು ದರ ನಿಗದಿಪಡಿಸುವ ವಿಷಯ ಸರ್ಕಾರದವರ ಮುಡಿದೆಯೆ?

ಆ) ಹಾಗಿದ್ದಲ್ಲಿ ಈ ವಿಷಯವು ಯಾವ ಹಂತದಲ್ಲಿದೆ?

ಶ್ರೀ ಜೆ.ಹೆಚ್. ಪಟೇಲ್
(ಉಪಮುಖ್ಯಮಂತ್ರಿಗಳು)

ಅ) ವಿದ್ಯುತ್ ಮಂಡಳಿಯ ಮತ್ತು ಆರ್ಥಿಕ ಪರಿಸ್ಥಿತಿ ಉತ್ತಮ

ಆ) ಪಡಿಸುವ ವಿಷಯವನ್ನು ಸರ್ಕಾರ ಸಮಗ್ರವಾಗಿ ಪರಿಶೀಲಿಸುತ್ತಿದೆ.